
# ಬೆಳಕಿನ ಸಂಚಲನ

ಸಂ 1, ಸಂ 5 ಸೆಪ್ಟೆಂಬರ್ 2013



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

**ಅನು: ಶ್ರೀದೇವಿ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು)

ಯಾರಾದರೂ ಪ್ರೀತಿಯನ್ನು ಹೊಂದಿದ್ದರೆ, ಅದನ್ನು ಪ್ರಜ್ಞಾಪೂರ್ವಕವಾಗಿ ಹರಡದಿದ್ದರೂ ಅವರು ಬೆಳಕಿನ ಕ್ರಾಂತಿಯನ್ನು ಕೊಂಡೊಯ್ಯುತ್ತಿದ್ದಾರೆ ಎಂದು ನಾನು ಹೇಳುತ್ತೇನೆ. ಪ್ರೀತಿ ಬೆಳಕಿನ ಒಂದು ಅಂಶ. ಅಂತೆಯೇ, ಶಾಂತಿ, ಪ್ರಮಾಣಿಕತೆ, ಕರುಣೆಗಳೆಲ್ಲವೂ ಬೆಳಕಿನಲ್ಲಿವೆ. ನಾವು ಇವುಗಳನ್ನು ಹೊಂದಿದಾಗ, ಅವುಗಳು ತಂತಾನೆ ಕಂಪನಗಳಂತೆ ಸುತ್ತಲೂ ಹರಡುತ್ತವೆ. ಹಾಗೂ ಅವು ಮನುಷ್ಯರನ್ನು ಮಾತ್ರವಲ್ಲದೆ, ಪ್ರತಿ ಜೀವಿ, ನಿರ್ಜೀವಿಗಳನ್ನು ತಲುಪುತ್ತವೆ. ಈ ಬೆಳಕಿನ ಕ್ರಾಂತಿಯ ಸೊಗಸೆಂದರೆ ಅದು ಬೆಳಕನ್ನು ಚಾನಲ್ ಮಾಡುವವರ ಮೇಲೆ ಯಾವುದೇ ರೀತಿಯ ಷರತ್ತನ್ನು ಹೇರುವುದಿಲ್ಲ ಮತ್ತು ಏನನ್ನೂ ಕೇಳುವುದಿಲ್ಲ. ದೇಣಿಗೆ ಕೊಡಬೇಕಿಲ್ಲ, ಸದಸ್ಯರಾಗಬೇಕಿಲ್ಲ, ಮತಾಚರಣೆಗಳಿಲ್ಲ, ಗಡಿರೇಖೆಗಳಿಲ್ಲ, ಪ್ರವಚನಗಳಿಲ್ಲ. ಈ ಸರಳ ತಂತ್ರದ ಹಿಂದೆ, ಋಷಿಗಳ ಸಾವಿರಾರು ವರ್ಷಗಳ ಪ್ರಯೋಗಪರೀಕ್ಷೆ ಇದೆ.

ಈ ಕ್ರಾಂತಿ ನಿಧಾನವಾಗಿ ಹರಡಬಹುದು. ಆದರೆ ಅದು ನಶಿಸುವುದಿಲ್ಲ. ನಾವು ನಮ್ಮ ಭಾಗದ ಲೈಟ್ ಚಾನಲಿಂಗ್ ಮಾಡೋಣ ಮತ್ತು ಹೊಸ ಯುಗಕ್ಕೆ ಕಾಲಿಡಲು ಕಾಯೋಣ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಪ್ರಪಂಚದ ಬಹುತೇಕ ಜನರು ಯುದ್ಧದ ವಿರುದ್ಧ ತೀವ್ರವಾದ ಧ್ವನಿ ಎತ್ತಿದಾಗ ಅಧಿಕಾರದಲ್ಲಿರುವವರು ಆ ಧ್ವನಿಯನ್ನು ಕಡೆಗಣಿಸಲಾಗದೆ ಹೋದಾಗ ಜನರ ಸಾಮೂಹಿಕ ಪ್ರಜ್ಞೆಯಲ್ಲಿ ಉಂಟಾಗುತ್ತಿರುವ ಬದಲಾವಣೆ ಎದ್ದು ಕಾಣುತ್ತಿತ್ತು.

ಈ ವಿಶ್ವದ ಬಹುತೇಕ ಜನರು ಹೊಸಯುಗವನ್ನು ಬಯಸಿದ್ದೇ ಆದರೆ ತಕ್ಷಣವೇ ನಮಗೆ ಅದನ್ನು ಉಡುಗೊರೆಯಾಗಿ ಕೊಡಲಾಗುತ್ತದೆ ಎಂದು ಮಹರ್ಷಿ ಅಮರರವರು ಹೇಳಿದ್ದರು. ಈ ಪ್ರಪಂಚದ ಇತ್ತೀಚಿನ ಬೆಳವಣಿಗೆಗಳು ಜನರ ಇಚ್ಛೆಯ ಶಕ್ತಿಯನ್ನು ಸೂಚಿಸುತ್ತವೆ. ಲೈಟ್ ಚಾನಲ್ ಮಾಡಿದಾಗ, ಪ್ರಪಂಚವನ್ನು ಉತ್ತಮವಾಗಿಸುವ ನಮ್ಮ ಇಚ್ಛೆಯ ಕಂಪನಗಳನ್ನು ಬಲಗೊಳಿಸುತ್ತೇವೆ ಮತ್ತು ಎಲ್ಲೆಡೆ ಹರಡುತ್ತೇವೆ. ಈ ಕಂಪನಗಳು ಇತರರನ್ನು ತಲುಪಿ, ಉತ್ತಮ ಬದುಕಿನ ನಿರೀಕ್ಷಣೆಯನ್ನು ಜಾಗೃತಗೊಳಿಸುತ್ತವೆ ಮತ್ತು ಬಲಗೊಳಿಸುತ್ತವೆ.

ಹೊಸಯುಗ ಈಗ ಬಹು ದೂರದ ವಾಸ್ತವದಂತೆ ಕಾಣಿಸುವುದಿಲ್ಲ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಅಮಾನವೀಯ ಮತ್ತು ಆತ್ಮವನ್ನು ತಲ್ಲಣಗೊಳಿಸುವ ಘಟನೆಗಳನ್ನು ನಾವು ಈಗ ಕಾಣುತ್ತಿದ್ದೇವೆ. ಇದರ ಜೊತೆ ಜೊತೆಯಲ್ಲೇ, ಅಂಧಕಾರದ ನಡುವೆ ಅನೇಕ ಬೆಳಕಿನ ಕಿರಣಗಳನ್ನು ಗಮನಿಸಬಹುದು. ಶಿಷ್ಟ ಮತ್ತು ದುಷ್ಟ ಶಕ್ತಿಗಳ ಧ್ರುವೀಕರಣವನ್ನು ಸ್ಪಷ್ಟವಾಗಿ ಕಾಣಬಹುದು. ಈ ಪ್ರಸಕ್ತ ಸನ್ನಿವೇಶದಲ್ಲಿ ಉದ್ರೇಕಕಾರಿ ಸುದ್ದಿಗೆ ಪ್ರಾಮುಖ್ಯತೆ ಕೊಡಲಾಗುತ್ತಿದೆ ಆದರೆ ಪ್ರೀತಿ ಮತ್ತು ಪ್ರಮಾಣಿಕತೆಯ ಅನೇಕ ಕಾರ್ಯಗಳನ್ನು ಮಾಧ್ಯಮ ಕಡೆಗಣಿಸಿದೆ. ಇದು ಬೆಳಕನ್ನು ಆರಿಸಿಕೊಳ್ಳುವ ಸಮಯ. ಈ ಸಮಯದಲ್ಲಿ ಹೆಚ್ಚು ಬೆಳಕನ್ನು ಚಾನಲ್ ಮಾಡಬೇಕು ಮತ್ತು ಸಹನೆಯಿಂದ ಕಾಯಬೇಕು. ಬೆಳಕು ಉದಯವಾಗುವ ಮೊದಲು ಯಾವಾಗಲೂ ಕತ್ತಲು ಇರುತ್ತದೆ. ಹೊಸ ಯುಗ ಸಧ್ಯದಲ್ಲೇ ಆರಂಭವಾಗಲಿದೆ.

ನಮ್ಮ ಕಾರ್ಯಕರ್ತರು ಅವರ ಜೀವನದಲ್ಲಿ ಹಲವಾರು ಸವಾಲು ಮತ್ತು ತೊಂದರೆಗಳನ್ನು ಎದುರಿಸುತ್ತಿದ್ದರೂ ಸಹ ಲೈಟ್ ಚಾನಲಿಂಗ್ ಕಾರ್ಯ ಚೆನ್ನಾಗಿ ನಡೆಯುತ್ತಿದೆ. ಅವರ ಪ್ರೀತಿ ಮತ್ತು ಅತ್ಯುತ್ಸಾಹ ಈ ಸಂಚಲನದ ಹಿಂದಿರುವ ಶಕ್ತಿ. ಬೆಳಕು ಹೆಚ್ಚು ಹೆಚ್ಚು ಆತ್ಮಗಳನ್ನು ಸ್ಪರ್ಶಿಸಲಿ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರಸ್ತೆ) ಬೆಂಗಳೂರು-560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ-ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

### ಬೆಂಗಳೂರು

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ. 890, 38ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ, 4ನೇ 'T' ಬ್ಲಾಕ್, ಜಯನಗರ
☎ 9972888033 ಕಾರ್ತಿಕ್ ಎನ್.

ಗುರುವಾರ (ಸಂಜೆ 6:30 - 7:00)
ನಂ. 312, ಹಂತ-4, ಗೋಲ್ಡನ್ ಪಾರ್ಕ್
ಅಪಾರ್ಟ್‌ಮೆಂಟ್, ಕೆ.ಸಿ.ಡಿ.ಸಿ. ಮುಖ್ಯರಸ್ತೆ,
ಬೊಮ್ಮನಹಳ್ಳಿ.
☎ 9886437042 ಡಾ. ರವಿಂದರ್ ಸಿಂಗ್ ಗೌರ್

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೇಕರ್

ಶನಿವಾರ (ಸಂಜೆ 5:30 - 6:00)
ಶ್ರೀ ರಂಗ ಕಲಾಕ್ಷೇತ್ರ, 13ನೇ ಅಡ್ಡರಸ್ತೆ,
2ನೇ ಹಂತ, ಇಂದಿರಾನಗರ
☎ 9902844667 ಶ್ರೀಮತಿ ಮಂಜು ಮಹೇಶ್ವರಿ

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ, 8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ, ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್, ಆಂಜನೇಯ ದೇವಸ್ಥಾನದ
ಎದುರು, ಅಶ್ವತ್ಥ ನಗರ ಮುಖ್ಯ ರಸ್ತೆ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಪುಣೆಯ ಒಂದು ಪೊಲೀಸ್ ಸ್ಟೇಷನ್‌ನಲ್ಲಿ ಲೈಟ್ ಚಾನಲಿಂಗ್ ಮಾಡುತ್ತಿರುವುದು

## ಪ್ರಮುಖ ಘಟನೆಗಳು

- ಫೆಬ್ರವರಿ 1, 2010 – 50 ಕ್ಕೂ ಹೆಚ್ಚು ಸ್ವಯಂಸೇವಕರ ತಂಡವೊಂದು ದಕ್ಷಿಣ ಭಾರತದ 50 ಶಾಲೆಗಳನ್ನು ಸಂಪರ್ಕಿಸಿ ಸುಮಾರು 30,000 ಮಕ್ಕಳಿಂದ ಲೈಟ್ ಚಾನಲಿಂಗ್ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನಕ್ಕೆ ಭಾರಿ ಚಾಲನೆ ನೀಡಿದರು.
- ಡಿಸೆಂಬರ್ 18, 2010 – 50 ಕ್ಕೂ ಹೆಚ್ಚು ಸ್ವಯಂಸೇವಕರ ತಂಡವೊಂದು ಮೈಸೂರು, ಬೆಂಗಳೂರು, ಚೆನ್ನೈ, ಮುಂಬೈ ಮತ್ತು ಹೈದರಾಬಾದ್‌ಗಳಲ್ಲಿರುವ 107 ಶಾಲೆಗಳಿಗೆ ಒಂದೇ ದಿನದಲ್ಲಿ ಭೇಟಿ ನೀಡಿ 62,000 ಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಮಾಡುವುದನ್ನು ಕಲಿಸಿಕೊಟ್ಟರು.
- ಫೆಬ್ರವರಿ 1, 2011, ವಿಶ್ವ ಚಾನಲ್‌ಗಳ ದಿನ – 130 ಸ್ವಯಂಸೇವಕರು ಭಾರತದಾದ್ಯಂತ ಸುಮಾರು 600 ಶಾಲೆಗಳಲ್ಲಿನ 4 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿಸಿದರು.
- ಜನವರಿ 18, 2012 – ಬೆಂಗಳೂರು, ಪುಣೆ, ಚೆನ್ನೈ ಮತ್ತು ಮಂಗಳೂರಿನ 11, 570 ಮಕ್ಕಳು 16 ವಿವಿಧ ಸೆಷನ್‌ಗಳಲ್ಲಿ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2012, ವಿಶ್ವ ಚಾನಲ್‌ಗಳ ದಿನ – ನೂರಾರು ಶಾಲೆಗಳ 6 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಮೇ 7, 2012 – ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ಲೈಟ್ ಚಾನಲ್‌ಗಳ ಸಮಾವೇಶದಲ್ಲಿ ಸುಮಾರು ಒಂದು ಸಾವಿರ ಜನರು ಸೇರಿದ್ದರು. ಪ್ರಪಂಚದಾದ್ಯಂತ ಸಾವಿರಾರು ಜನರು ವೆಬ್‌ಕಾಸ್ಟ್ ಮತ್ತು ಮನೋಸಂಪರ್ಕಗಳ ಮೂಲಕ ತಮ್ಮ ತಮ್ಮ ಸ್ಥಳದಿಂದಲೇ ಭಾಗವಹಿಸಿ 15 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2013, ಮೂರನೇ ವಿಶ್ವ ಚಾನಲ್‌ಗಳ ದಿನ – ಭಾರತದಾದ್ಯಂತ 1868 ಶಾಲೆಗಳ ಸುಮಾರು 8.86 ಲಕ್ಷ ಮಕ್ಕಳು ಮತ್ತು ಅಧ್ಯಾಪಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜೂನ್ 29, 2013 - ಬೆಂಗಳೂರು, ಮೈಸೂರು, ಹೈದ್ರಾಬಾದ್, ಸಾಂಗ್ಲಿಯಲ್ಲಿನ 30 ಶಾಲೆಗಳಲ್ಲಿ ಮತ್ತು ಭಾರತದಾದ್ಯಂತ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ 13,449 ಮಕ್ಕಳು ಲೈಟ್ ಚಾನಲಿಂಗ್ ಮಾಡಿದರು.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4277 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 24.50 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1140 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.18 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಬೆಳಕಿನ ಪ್ರಭಾವ

**ಪದ್ಮಜ ಬಾಲಾಜಿ**

**ಅನು: ವಿಕಾಸ್ ಕಾರಂತ್**

ನಾನು ಬೆಳಕಿನ ಜೊತೆಯಲ್ಲಿ ಕುಳಿತುಕೊಳ್ಳುತ್ತೇನೆ. ಎಂದಿನಂತೆ, ಪ್ರತಿಯೊಂದು ಸೃಜನಾತ್ಮಕ ಕಾರ್ಯದ ಜೊತೆ ಇರುವ ದಿನಗಟ್ಟಲೆಯ ಅಸಹಾಯಕತೆಯು ನನ್ನನ್ನು ಬಾಡಿಸಿತು. ನಿಮಗೆ ಈಗಾಗಲೆ ತಿಳಿದಿರುವಂತೆ ನಾನೇನೂ ಯಥೇಚ್ಛವಾಗಿ ಬರಿಯುವ ಲೇಖಕಿಯಲ್ಲ. ದೇವರ ಕೃಪಾಶೀರ್ವಾದ ನನ್ನ ಮೇಲಾಗುತ್ತದೆ.

* * *

“ನನ್ನ ಪುಟ್ಟ ಕಣ್ಣುಗಳು ಆಶ್ಚರ್ಯದಿಂದ ನೋಡಿದವು. ಅರ್ಧ ಒಣಗಿದ ಜೀವವಿಲ್ಲದಂತೆ ಕಂಡ ಗಿಡವು ಒಂದು ಸಣ್ಣ ಮಳೆಗೆ ಚಿಗುರಿಕೊಂಡು ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದದ್ದನ್ನು ನಾನು ಚಿಕ್ಕವಳಿರುವಾಗ ಆನಂದಿಸಿದೆ. ದೈವೀಕೃಪೆಯಿಂದ ಬಂದ ಮಳೆಯು ಮರ ಗಿಡಗಳಲ್ಲೂ ಚೈತನ್ಯವನ್ನು ತುಂಬುವಂತಹ ವಿಸ್ಮಯವನ್ನು ತರಬಲ್ಲುದು ಎಂದು ಇದರಿಂದ ತಿಳಿದೆ.”

ಈ ಮಾತುಗಳನ್ನು ನಾನು ಒಬ್ಬರ ಜೊತೆ ಜೀವನದ ಏರಿಳಿತಗಳ ಬಗ್ಗೆ ಮಾತನಾಡುವಾಗ ಅವರಿಂದ ಆಸಕ್ತಿಯಿಂದ ಕೇಳುತ್ತಿದ್ದೆ. ಅವರು ಹೇಳುತ್ತಿದ್ದರು ...

“ನನಗೆ ಆಗ ಲೈಟ್ ಚಾನಲಿಂಗ್ ವಿಧಾನ ಗೊತ್ತಿರಲಿಲ್ಲ. ನನಗಾದ ಮಾನಸಿಕ ನೋವಿನಿಂದ ನನ್ನ ಆತ್ಮವು ನರಳುತ್ತಿತ್ತು. ನಾನು ಈ ನೋವಿನಿಂದ ಹೊರಬರಲು ಬೆಳಕನ್ನು ಉಪಯೋಗಿಸಿದೆ. ಮೊದಲು ನಾನು ದಿನದ ಎಲ್ಲಾ ಸಮಯದಲ್ಲಿ ಬೆಳಕಿನ ಒಂದು ಗೋಳದಲ್ಲಿ ಇದ್ದೇನೆಂದು ಭಾವಿಸಿ, ಮಲಗಿದಾಗ ಬೆಳಕು ನನ್ನ ಜೊತೆಯಲ್ಲಿ ಇರಬೇಕೆಂದು ಪ್ರಾರ್ಥಿಸಿದೆ. ನನಗಾದ ನೋವಿನಿಂದ ಸಂಪೂರ್ಣವಾಗಿ ಹೊರಬರಲು ಎರಡು ದಿನಗಳು ಬೇಕಾಯಿತು. ನಂತರದ ಎರಡು ದಿನಗಳಲ್ಲಿ ನನ್ನ ಮಾನಸಿಕ ನೋವಿಗೆ ಕಾರಣನಾದ ವ್ಯಕ್ತಿಯ ಮೇಲೆ ಬೆಳಕಿನ ಸುರಿಮಳೆಯಾಗುತ್ತಿದೆ ಎಂದು ಕಲ್ಪಿಸಿಕೊಂಡೆ.

ಈ ಎರಡು ಬೆಳಕಿನ ಗೋಳಗಳನ್ನು ಸೇರಿಸುವುದು ನನಗೆ ಒಂದು ತರದ ಪರೀಕ್ಷೆಯಾಗಿತ್ತು. ಮೊದಲಿಗೆ ನನಗೆ ಅಂಜಿಕೆಯಾದರೂ, ಪ್ರತಿಯೊಬ್ಬರೂ ದೇವರ ಮಕ್ಕಳು ಎಂಬ ಅರಿವುಂಟಾದಕೂಡಲೇ ಸಮಯವನ್ನು ವ್ಯರ್ಥಮಾಡದೆ ನಮ್ಮ ಸಂಬಂಧ ಆತ್ಮ ಮಟ್ಟದ್ದು ಎಂಬ ಬಲವಾದ ಭಾವನೆಯೊಂದಿಗೆ ಎರಡೂ ಬೆಳಕಿನ ಗೋಳಗಳಿಗೆ ಸಂಪರ್ಕವೇರ್ಪಡಿಸಿದೆ. ಸ್ವಲ್ಪ ಸಮಯದಲ್ಲೇ ನನಗಾದ ನೋವು ಮತ್ತು ದ್ವೇಷ ಭಾವ ಮಾಯವಾದವು. ನಾನೀಗ ಆ ವ್ಯಕ್ತಿಯನ್ನು ಯಾವುದೇ ರೀತಿಯ ಅಭಿಪ್ರಾಯ ಹೊಂದದೆ ನೋಡಬಲ್ಲೆ. ಎಲ್ಲರನ್ನೂ ಈಗ ದೇವರ ಮಕ್ಕಳೆಂದೇ ನೋಡುತ್ತೇನೆ.”

ನಗುವು ಸಾಂಕ್ರಾಮಿಕ ಹಾಗೂ ಪ್ರೀತಿ ಸುಲಭ ಗ್ರಾಹ್ಯ.

ಪ್ರತಿಯೊಂದು ಸಂದರ್ಭದಲ್ಲೂ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ ಎನ್ನುವುದು ನಮ್ಮ ಕೈಯಲ್ಲಿದೆ ಅಲ್ಲವೇ? ನಮ್ಮ ಮಾನಸಿಕ ನೋವು, ಕೋಪ ಮತ್ತು ದ್ವೇಷಕ್ಕೆ ತಿರುಗಿ ಅದರಿಂದ ನಾವು ನಮ್ಮ ಒಳಗೆ ಹಾಗೂ ಸುತ್ತಲೂ ನಕಾರಾತ್ಮತೆಯನ್ನು ಸೃಷ್ಟಿಸಬಹುದು ಅಥವಾ ಬೆಳಕಿನ ಸಹಾಯವನ್ನು ಪಡೆದು ಸಂತೋಷದ ಚಿಲುಮೆಯಾಗಿ ಆ ಬೆಳಕನ್ನು ನಮಗೆ ನೋವುಂಟು ಮಾಡಿದವರಿಗೂ ಹರಡಬಹುದು.

ನಾವು ಯಾವಾಗಲೂ ಜೀವನದಲ್ಲಿ ನಡೆಯುವ ಪ್ರತಿಯೊಂದು ಕೆಟ್ಟ ಘಟನೆಗೂ, ನಮ್ಮ ಸುಪ್ತ ಪ್ರಜ್ಞೆಯಲ್ಲಿರುವ ಹಳೆಯ ದುರ್ಘಟನೆಗಳೇ ಕಾರಣ ಎಂದು ದೂಷಿಸುತ್ತೇವೆ ಹಾಗೂ ಅವುಗಳ ಮೂಲ ನಾವೇ ಎಂದು ಮರೆಯುತ್ತೇವೆ. ನನ್ನ ಮಿತ್ರ ಮಾಡಿದ ಹಾಗೆ ಜೀವನದ ಪ್ರತಿಯೊಂದು ಕ್ಷಣದಲ್ಲೂ ಬೆಳಕನ್ನು ಉಪಯೋಗಿಸುವುದರಿಂದ ನಾವು ಕರ್ಮದ ಪ್ರಭಾವವನ್ನು ಸ್ವಲ್ಪ ಮಟ್ಟಿಗೆ ಉಪಶಮನಗೊಳಿಸಬಹುದು.

* * *

ಧ್ಯಾನದ ಸಮಯದಲ್ಲಿ ನಾವು ಪಡೆದುಕೊಂಡಂತಹ ಆಧ್ಯಾತ್ಮಿಕ ಚೈತನ್ಯಗಳು ಸ್ಟೋರ್‌ಹೌಸ್ ನಂತೆ ಇರುವ ನಮ್ಮ ಸುಪ್ತ ಮನಸ್ಸಿನಲ್ಲಿ ತುಂಬಿರುತ್ತವೆ; ಹಾಗೂ ಅವು ನಮ್ಮ ಕರ್ಮದ ಪ್ರಭಾವಕ್ಕಿಂತಲೂ ಶಕ್ತಿಶಾಲಿಯಾಗಿವೆ. ಬೆಳಕನ್ನು ಆಯ್ಕೆ ಮಾಡಿಕೊಳ್ಳುವ ಮಾತ್ರದಿಂದಲೇ ನಮ್ಮ ಕರ್ಮಗಳು, ನಾವು ನಿರ್ಮಲ ಜೀವನವನ್ನು ನಡೆಸಲು ಉತ್ತೇಜನ ನೀಡುತ್ತವೆ ಎಂದು ನನ್ನ ಗುರುಗಳು ಹೇಳುತ್ತಿದ್ದರು. ಹೌದು, ಬೆಳಕಿನಿಂದ ಲಾಭವೊಂದೇ ಸಾಧ್ಯ.

* * *

ನಿನ್ನೆ ರಾತ್ರಿಯ ಮಳೆಯು ಗಿಡಮರಗಳ ಮೇಲೆ ಮಾಡಿದ ಮೋಡಿಗೆ ನನ್ನ ಹೃದಯವು ಸಂತೋಷದಿಂದ ಕುಣಿಯುತ್ತಿದೆ. ಜೊತೆಯಲ್ಲಿ ಕೇಳಿಬಂದ ಹಕ್ಕಿಗಳ ಕಲರವವು ಈ ಲೇಖನದ ಹೆಸರು ‘ಬೆಳಕಿನ ಪ್ರಭಾವ’ ಇರಲಿ ಎಂದು ಹೇಳಿದ ಹಾಗೆ ಅನಿಸಿತು. ನಾನೂ ಮೊದಲ ಬಾರಿಗೆ ಅವುಗಳ ಮಾತಿಗೆ ಒಪ್ಪಿದೆ.

## ಲೈಟ್ ಚಾನಲಿಂಗ್ ಕೇಂದ್ರಗಳು

### ಮೈಸೂರು
ಬುಧವಾರ (ಸಂಜೆ 6)
ಇನ್ಫೋಸಿಸ್ ಲಿ, ಹೆಬ್ಬಾಳ್ ಎಲೆಕ್ಟ್ರಾನಿಕ್ಸ್ ಸಿಟಿ,
ಹೂಟಗಲ್ಲಿ, ಮೈಸೂರು-570018
☎ 9980837179, ಶ್ರೀ ಆನಂದ್ ನಿರಂಜನ್
☎ 8095026224, ಶ್ರೀ ಆಕಾಶ್ ಮಲ್ಲಿಕ್

### ಸೋಲಾಪೂರ್
ಪ್ರತಿದಿನ (ಸಂಜೆ 7:00 - 7:30)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ
ಭಾನುವಾರ (ಬೆಳಿಗ್ಗೆ 10:00 -10:30) ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ. ಕೆ. ನಗರ
☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್.


### ತಿರುನಲ್ವೇಲಿ
ಪ್ರತಿ ದಿನ (ಸಂಜೆ 7:00 - 7:30)
ವಡಕ್ಕು ತೆರು, ಚೆಲ್ಲಾ ಪಿಳ್ಳೈಯಾರ್ ಕುಲಮ್
ಎ.ಪಿ. ನಾದನೂರ್ ಪೋಸ್ಟ್
ಆಲಂಗುಲಮ್ ತಾಲ್ಲೂಕು - 627423
☎ 9444458747 ಶ್ರೀ ಮಾರಿಯಪ್ಪನ್ ಎನ್.

### ಪುಣೆ
ಶನಿವಾರ (ಸಂಜೆ 6.30 - 7.00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169 ಶ್ರೀ ಆಶುತೋಶ್ ನವನ್‌ಗುಲ್

ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ಯಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

### ವಿಶಾಖಪಟ್ಟಣ
ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207,
ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್,
ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

### ಮೀರಜ್
ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463 ಶ್ರೀ ಮಹಾಜನ್



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಜುಲೈ 18 ರಂದು ನಾನು ಬಸ್ ನಿಲ್ದಾಣವನ್ನು ತಲುಪಿದಮೇಲೆ, ಮೊಬೈಲ್ ಫ಼ೋನ್ ಮನೆಯಲ್ಲಿಯೇ ಬಿಟ್ಟು ಬಂದಿರುವುದರ ಅರಿವಾಯಿತು. ಮನೆಗೆ ಹಿಂತಿರುಗಿ ಹೋದರೆ ಈ ಮೊದಲೇ ನಿರ್ಧರಿಸಿದಂತೆ ನಾನು ಮತ್ತೊಬ್ಬ ಕಾರ್ಯಕರ್ತನನ್ನು ಭೇಟಿಯಾಗುವುದಕ್ಕೆ ಮತ್ತು ಅಂದಿನ ಲೈಟ್ ಚಾನಲಿಂಗ್ ಸೆಷನ್‌ಗಾಗಿ ಶಾಲೆಗೆ ತಲುಪುವುದಕ್ಕೆ ತಡವಾಗುವ ಸಾಧ್ಯತೆ ಇತ್ತು. ಆ ದಿನದ ಕಾರ್ಯಕ್ರಮದ ಸ್ಥಳ, ಸಮಯ ಇತ್ಯಾದಿಗಳು ಪೂರ್ವ ನಿರ್ಧಾರಿತವಾಗಿದ್ದರೂ, ನಮ್ಮಿಬ್ಬರಿಗೆ ಸಂಪರ್ಕಿಸಲು ಯಾವುದೇ ಸಾಧನವಿಲ್ಲದಿದ್ದುದರಿಂದ ಗೊಂದಲವುಂಟಾಗುವ ಸಾಧ್ಯತೆಯಿತ್ತು.

ಬೆಳಕಿನ ಮೇಲೆ ಭಾರ ಹಾಕಿ, ಬೆಳಕಿನ ಮೂಲಕ ನಾನು ಆತನನ್ನು ಸಂಪರ್ಕಿಸಬಹುದೆಂದು ಬಸ್ಸನ್ನೇರಿದೆ. ಒಂದು ಬೆಳಕಿನ ಗೋಳದ ಮುಖಾಂತರ ಸಂದೇಶವನ್ನು ಆತನಿಗೆ ಕಳಿಸಿದೆ. ನಾವು ಎರಡು ಬಸ್ಸುಗಳನ್ನು ಬದಲಾಯಿಸಬೇಕಾಗಿಬಂದರೂ, ನಾವಿಬ್ಬರೂ ಒಂದೇ ಸಮಯದಲ್ಲಿ ಅಲ್ಲಿ ತಲುಪಿದೆವು! ಆತನಿಗೆ ನನ್ನ ಸಂದೇಶದ ಅರಿವಿರಲಿಲ್ಲ. ಆತ ಕೂಡಾ ತಾನು ತಲುಪಬೇಕಾದ ಸ್ಥಳವನ್ನು ಸಮಯಕ್ಕೆ ಸರಿಯಾಗಿ ತಲುಪುವಂತೆ ಬೆಳಕನ್ನು ಪ್ರಾರ್ಥಿಸಿದ್ದುದರಿಂದ ತಡವಾಗಿ ಬಂದರೂ ಆತ ಗಾಬರಿಗೊಳ್ಳಲಿಲ್ಲ. ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ಋಷಿಗಳಿಂದ ಮತ್ತು ಬೆಳಕಿನಿಂದ ಅನುಗ್ರಹ ಪಡೆಯುವುದು ನನ್ನ ಜೀವನದ ಒಂದು ಭಾಗವಾಗಿದೆ. ಬೆಳಕು ಮತ್ತು ಪ್ರೀತಿಯನ್ನು ಇಡೀ ಪ್ರಪಂಚಕ್ಕೆ ಹರಡಲು ಸಾಧ್ಯವಾಗುವುದರ ಜೊತೆಗೆ ಏಕಕಾಲದಲ್ಲಿಯೇ ನಾವು ಹೆಮ್ಮೆಪಡುವಂತೆಯೂ ಮತ್ತು ವಿನಮ್ರರಾಗುವಂತೆಯೂ ಮಾಡುವ ಕೆಲಸ ಬಹುಶಃ ಇದೊಂದೇ ಇರಬಹುದು.

–ಮನೋಜ್ ದೇಶ್‌ಪಾಂಡೆ, ಕಾರ್ಯಕರ್ತ

ನನ್ನ ಕೆಲಸದ ಒತ್ತಡದಿಂದಾಗಿ ಲೈಟ್ ಚಾನಲಿಂಗ್ ಕಾರ್ಯಕ್ರಮಗಳಲ್ಲಿ ಕ್ರಮಬದ್ಧವಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂದು ನನಗೆ ದುಃಖವಾಗುತ್ತಿತ್ತು. ಆದರೂ ಪ್ರತಿ ತರಗತಿಯಲ್ಲಿ ಸೆಷನ್ ಇದ್ದಾಗ ರಜೆ ತೆಗೆದುಕೊಳ್ಳಲು ನಿರ್ಧರಿಸಿದೆ. ಅಂತಹ ಒಂದು ಸಂದರ್ಭ ತಾನಾಗಿಯೇ ಒದಗಿ ಬಂತು. ಅಂದು ನಾನು ಸೆಷನ್‌ಗೆ ಹೋಗಲು ಅತ್ಯಂತ ಕಾತುರಳಾಗಿದ್ದೆ. ಅದೇ ದಿನ ಆಫೀಸ್‌ನಲ್ಲಿ ನನ್ನ ಪ್ರೆಸೆಂಟೇಶನ್ ಇದೆ ಎಂದು ತಿಳಿದೂ ನಾನು ರಜೆ ಕೇಳಬೇಕೆಂದು ನಿರ್ಧರಿಸಿದೆ. ಗುರೂಜಿಯವರಿಗೆ ಹಾಗೂ ಋಷಿಗಳಿಗೆ ಮೌನವಾಗಿ ಪ್ರಾರ್ಥಿಸಿಕೊಂಡೆ. ನಾನು ರಜೆ ಕೇಳುವ ಮೊದಲೇ, ನನ್ನ ಮೇಲಧಿಕಾರಿ ಒಂದು ಕಾರ್ಯಕ್ರಮದ ಸಲುವಾಗಿ ಅಂದು ರಜೆಯನ್ನು ಘೋಷಿಸಿದರು! ಆಗ ನನಗೆ ಆಶ್ಚರ್ಯ ಮತ್ತು ಸಂತೋಷ ಎರಡೂ ಒಟ್ಟಿಗೇ ಆಯಿತು. ಆ ದಿನ ಲೈಟ್ ಚಾನಲಿಂಗ್ ಕಾರ್ಯಕ್ರಮದಲ್ಲಿ ಯಾವುದೇ ಚಿಂತೆಯಿಲ್ಲದೆ ಭಾಗವಹಿಸಲು ಸಾಧ್ಯವಾದುದಕ್ಕೆ ಅತ್ಯಂತ ಅನುಗ್ರಹಿತಳಾದಂತೆ ಅನಿಸಿತು.

– ನಿತ್ಯಾ ಜೇಮ್ಸ್, ಕಾರ್ಯಕರ್ತೆ

ದಿನಾಂಕ 26.7.2013 ರಂದು, ಮದ್ರಾಸ್ ಸೇವ ಸದನ ಹೈಯರ್ ಸೆಕೆಂಡರಿ ಶಾಲೆಯಲ್ಲಿ ನಡೆಸಿದ ಲೈಟ್ ಚಾನಲಿಂಗ್ ಅತಿ ಸುಂದರವಾಗಿ ಅಂತ್ಯಗೊಂಡಿತು. ಸೆಷನ್ ಮುಗಿಯುತ್ತಿದ್ದಂತೆಯೇ 7ನೇ ತರಗತಿಯ ವಿದ್ಯಾರ್ಥಿನಿಯೊಬ್ಬಳು ಹತ್ತಿರ ಬಂದು "ನಾನು ನೋವುಂಟು ಮಾಡಿದ್ದ ವಿದ್ಯಾರ್ಥಿನಿಗೆ ಮನಸ್ಸಿನಲ್ಲಿಯೇ ಕ್ಷಮೆ ಕೋರಿದೆ" ಎಂದು ಹೇಳಿದಳು. ಇದಕ್ಕೆ ಸ್ಪಂದಿಸಿದ ಬೇರೆ ವಿದ್ಯಾರ್ಥಿನಿ ನಾಚಿಕೆಯ ನಗುವಿನೊಂದಿಗೆ ಕ್ಷಮೆಯನ್ನು ಸಂತೋಷದಿಂದ ಸ್ವೀಕರಿಸಿದಳು. ಇಂಥ ತಕ್ಷಣದ ಪರಿವರ್ತನೆ ಸಂತೋಷ ತರುತ್ತದೆ. ಇಡೀ ತರಗತಿ ಆ ವಿದ್ಯಾರ್ಥಿನಿಯನ್ನು ಅಭಿನಂದಿಸುತ್ತ ಚಪ್ಪಾಳೆ ತಟ್ಟಿತು.

– ಪದ್ಮಜ ಬಾಲಾಜಿ, ಕಾರ್ಯಕರ್ತೆ

ನಾವು ಬೆಂಗಳೂರಿನ ಕೋಗಿಲು ಮುಖ್ಯ ರಸ್ತೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಲೈಟ್ ಚಾನಲಿಂಗ್ ಸೆಷನ್ ಮಾಡಿದೆವು. ಕೆಲವು ವಿದ್ಯಾರ್ಥಿಗಳು ಹೃತ್ಪೂರ್ವಕವಾಗಿ ಲೈಟ್ ಚಾನಲಿಂಗ್ ಮಾಡುತ್ತಿದ್ದರು. ನಮ್ಮ ದೇಹಗಳ ಮೂಲಕ ಅಪಾರವಾದ ಚೈತನ್ಯಗಳು ಹರಿಯುತ್ತಿರುವ ಅನುಭವ ನಮಗಾಯಿತು. ಈ ಸೆಷನ್ ಪ್ರಗತಿಯಲ್ಲಿರುವಾಗ ಒಂದು ಪ್ರಕಾಶಮಾನವಾದ ಬೆಳಕಿನ ಕಿರಣ ಕೆಳಗಿಳಿದು ಬಂದು ಒಬ್ಬ ವಿಧ್ಯಾರ್ಥಿಯನ್ನು ಮಾತ್ರ ತಲುಪುತ್ತಿದ್ದುದನ್ನು ನನ್ನ ಮುಚ್ಚಿದ ಕಣ್ಣುಗಳಿಂದ ಕಂಡೆ. ಆ ವಿದ್ಯಾರ್ಥಿ ಬೆಳಕಿನ ಕಿರಣದೊಂದಿಗೆ ಸಂಪರ್ಕಹೊಂದಿದ್ದು ಬೆಳಕನ್ನು ಪ್ರತಿಯೊಬ್ಬರಿಗೂ ಹರಡುತ್ತಿದ್ದನು. ಅದೇ ಸಮಯದಲ್ಲಿ, ಅಲ್ಲಿಯೇ ಇದ್ದ ಇನ್ನೊಂದು ಮಗು ಹೊಂಬಣ್ಣದ ಬೆಳಕಿನಿಂದ ಹೊಳೆಯುತ್ತಿದ್ದ ಹಾಗೂ ಆ ಬೆಳಕನ್ನು ತನ್ನ ಸುತ್ತಲೂ ಹೊರಸೂಸುತ್ತಿದ್ದ. ಇದೊಂದು ಅದ್ಭುತವಾದ ಅನುಭವವಾಗಿತ್ತು. ಆ ಚೈತನ್ಯಗಳು ವಿಸ್ಮಯಕರವಾಗಿದ್ದವು.

– ಪ್ರತಾಪ್ ಎಮ್ ಗೋಪಾಲಕೃಷ್ಣನ್, ಕಾರ್ಯಕರ್ತ

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫ಼ೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫ಼ೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು ; ಮಾನಸ ಫ಼ೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ